ಕವಿತೆ



ತೇಜಾವತಿ ಎಚ್.ಡಿ.

ಕಲೆ: ಎಸ್.ಎಸ್. ಕಾಖಂಡಕಿ

# ಚುಚ್ಚುವ ಸೀರೆ

ಮುಂಜಾನೆ ಜಳಕ ಮುಗಿಸಿ
ಮುಡಿಗೆ ಮಲ್ಲಿಗೆಯ ದಂಡೆಯಿರಿಸಿ
ಅಂದನೆಯ ರವಿಕೆ ತೊಟ್ಟು
ಚಂದನೆಯ ಸೀರೆ ಉಟ್ಟು
ಕೆಂಪನೆಯ ಬೊಟ್ಟನಿಟ್ಟು
ನವಿಲು ಗರಿ ಬಿಚ್ಚುವಂತೆ
ನೆರಿಗೆ ಹಿಡಿದು ನಡೆಯುವ
ಅವಳಿಗೆ

ಸಂಜೆ ಐದಾಗುತ್ತಲೇ
ಸೀರೆ ಚುಚ್ಚಲು ಪ್ರಾರಂಭಿಸುತ್ತದೆ
ಲಾಡಿ ಕೊರೆಯಲು ಶುರುವಿಡುತ್ತದೆ
ಹೂವು ಹುಳುವಾದಂತೆ ಭಾಸವಾಗುತ್ತದೆ

ಬಹುಶಃ
ವ್ಯಾಲಿಡಿಟಿ ಎಕ್ಸ್ಪೈರ್ ಆದ ಬಳಿಕ
ಎಲ್ಲವೂ ಹೀಗೇ...

ಅಮೃತವಾಗಿದ್ದ ಗುಳಿಗೆ ವಿಷವಾದಂತೆ
ಹಗ್ಗ ಹಾವಾದಂತೆ
ಸೀರೆಯೂ....

ಕ್ಷಣಿಕ ಸಂಬಂಧಗಳೇ ಹೀಗೆ
ಆಕರ್ಷಕ ಸೀರೆಯ ಹಾಗೆ
ಸೀಮಿತ ಅವಧಿಯೊಳಗೆ
ಕಂಫರ್ಟ್ ಝೋನ್ ಸೃಷ್ಟಿಸುವ ಅವು
ವಾಯಿದೆ ಮುಗಿದ ಬಳಿಕ
ಚುಚ್ಚಲು ಶುರುವಿಡುತ್ತವೆ...

